IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಕನ್ನಡ ಮಹಿಳಾ ಕಥಾ ಸಾಹಿತ್ಯದಲ್ಲಿ ಸ್ತ್ರೀ ಅಸ್ಮಿತೆಯ ಪರಿಕಲ್ಪನೆ

**ಮಾರ್ಗದರ್ಶಕರು**
**ಡಾ. ಶಿವಕುಮಾರ. ಡಿ. ಸಿ.**
**ಸಹಾಯಕ ಪ್ರಾಧ್ಯಾಪಕರು,**
**ಕನ್ನಡ ವಿಭಾಗ,**
**ಜೈನ್ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ.**

**ಸಂಶೋಧನಾರ್ಥಿ**
**ಶ್ವೇತಾ ಎಂ.**
**ಸಹಾಯಕ ಪ್ರಾಧ್ಯಾಪಕರು,**
**ಕನ್ನಡ ವಿಭಾಗ**
**ವಿ.ವಿ.ಎಸ್.ಪ್ರಥಮ ದರ್ಜೆ ಕಾಲೇಜು.**

ಭಾರತೀಯ ಪರಂಪರೆಯಲ್ಲಿ ಸ್ತ್ರೀಯನ್ನು ದೈವ ಸಮಾನವಾಗಿ ಪೂಜಿಸುವ ಪದ್ಧತಿ ಇತ್ತು. ಹಾಗಾಗಿ ಮಹಿಳೆ ಗೌರವಕ್ಕೆ ಪಾತ್ರಳಾಗಿದ್ದಳು. ಅಂತೆಯೇ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಮಹಿಳೆಯರನ್ನು ಕುರಿತು ಪ್ರಸ್ತಾಪಿಸಿರುವುದು ಕಂಡುಬರುತ್ತದೆ. ಪುರುಷರು ರಚಿಸಿರುವ ಸಾಹಿತ್ಯದಲ್ಲಿ ಕಾಣಸಿಗುವ ಮಹಿಳೆಗೂ ಸ್ತ್ರೀಯರೇ ರಚಿಸಿರುವ ಸಾಹಿತ್ಯದಲ್ಲಿ ಕಾಣಿಸುವ ವಸ್ತುವಿಗೂ ವ್ಯತ್ಯಾಸವಿದೆ.

ಶತಮಾನಗಳಿಂದ ವಂಚನೆ, ದಬ್ಬಾಳಿಕೆ ಗುರಿಯಾಗುತ್ತ ಬಂದಿರುವ ಮಹಿಳೆಯರ ಸಮಸ್ಯೆಗಳು ಇದೀಗ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಮತ್ತಷ್ಟು ಸೂಕ್ಷ್ಮ ತೊಡಕುಗಳಿಗೆ ಒಳಪಡುತ್ತಿವೆ. ಸಾಂಪ್ರದಾಯಕ ಸಾಮಾಜಿಕ ವ್ಯವಸ್ಥೆ ಹಾಗೂ ಪುರುಷ ಪ್ರಾಧಾನ್ಯತೆಯ ದಬ್ಬಾಳಿಕೆಗಳೊಂದಿಗೆ ಇಂದು ತೋರುತ್ತಿರುವ ಸಾಮಾಜಿಕ – ರಾಜಕೀಯ ಚಿಕ್ಕಟ್ಟುಗಳ ಹಿನ್ನಲೆಯಲ್ಲಿ ಹೊಸ ಸಮಸ್ಯೆಗಳು ಕಂಡುಬರುತ್ತಿವೆ. ಒಂದೆಡೆ ಪ್ರಜಾಪ್ರಭುತ್ವವಾದಿ ಸ್ವಾತಂತ್ರ್ಯ – ಸಮಾನತೆಗಳ ರಾಜಕೀಯ ಹಕ್ಕುಗಳು ಸಂವಿಧಾನಾತ್ಮಕವಾಗಿ ನೀಡಲ್ಪಟ್ಟಿದ್ದರೂ ಮುಕ್ತವಾಗಿ ಮಹಿಳೆಯರು ನಾಗರೀಕ ಪರಿಸರದಲ್ಲಿ ಓಡಾಡಲಾರದ ಪರಿಸ್ಥಿತಿಯನ್ನು ಕಾಣುತ್ತೇವೆ. ಶೈಕ್ಷಣಿಕ ಹಾಗೂ ವೃತ್ತಿ ವಿಷಯಗಳಲ್ಲಿ ಮಹಿಳೆಯರು ಸ್ವಂತ ಸಾಧನೆಗಳನ್ನು ಮಾಡುತ್ತ ಪುರುಷರಿಗೆ ಸಮಾನವಾದ ಪೈಪೋಟಿ ನೀಡುತ್ತಿದ್ದರೂ ಅವರ ಸಾಮಾಜಿಕ, ಕೌಟುಂಬಿಕ ಸ್ಥಾನಮಾನಗಳಲ್ಲಿ ಸಂಭವಿಸುತ್ತಿರುವ ಪರಿವರ್ತನೆಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗುತ್ತಿಲ್ಲ. ಬದಲಾವಣೆಗಳ ಗತಿ ನಿಧಾನವಾಗಿದೆ. ಇವುಗಳನ್ನು ಕೇವಲ ಸಾಮಾಜಿಕ ಅಧ್ಯಯನದ ಭಾಗವಾಗಿ ಶೋಧಿಸುವಾಗ ಬಹಿರಂಗದ ಹೊರವಿವರಗಳು, ಅಂಕಿಅಂಶಗಳು ಗಮನಕ್ಕೆ ಬರಬಹುದೇ ಹೊರತಿ, ಸೂಕ್ಷ್ಮ ನೆಲೆಗಳನ್ನು ಅರಿಯಲು ಸಾಧ್ಯವಾಗುವುದಿಲ್ಲ.

ನಾಲ್ಕು ಗೋಡೆಗಳ ಮಧ್ಯದಲ್ಲಿ ಜೀವನ ನಡೆಸುವಂತಹ ಮಹಿಳೆಗೆ ಸಾಹಿತ್ಯ ರಚನೆ ಮಾಡುವುದು ಸಮಾಜದಲ್ಲಿ ಕಷ್ಟದಾಯಕವಾಗಿತ್ತು. ಅವಳಿಗೆ ಆಕರಗಳ ಅಲಭ್ಯವು ಕೂಡ ಕಾರಣವಾಗಿತ್ತು ಎನ್ನಬಹುದು, ಆದರೆ ಮುಂದುವರಿದಂತೆ ಆಧುನಿಕತೆ ಬೆಳೆದಂತೆಲ್ಲ ಶಿಕ್ಷಣ ವ್ಯವಸ್ಥೆ ಉದ್ಯೋಗ, ಅಭಿವ್ಯಕ್ತಿ ಸ್ವಾತಂತ್ರವನ್ನು ಬಳಸಿಕೊಂಡ ರೀತಿಯಿಂದ ಇತ್ತೀಚೆಗೆ ಮಹಿಳಾ ಸಾಹಿತ್ಯವನ್ನು ದಾಖಲಿಸುವ ಎಲ್ಲಾ ಪ್ರಯತ್ನಗಳು ನಡೆಯುತ್ತಲಿದೆ.

ಮಹಿಳಾ ಸಾಹಿತ್ಯ ಎಂದಾಕ್ಷಣ ನಮಗೆ ಕೇವಲ ಸ್ತ್ರೀ ಕೇಂದ್ರಿತ ಸಾಹಿತ್ಯ ಎಂದೆನಿಸುವುದು ಸಹಜ, ಆದರೆ ಅಲ್ಲಿ ಲೇಖಕಿಯರು ಅಂದಿನ ಸಮಾಜದ ಆಗುಹೋಗುಗಳನ್ನು ದಾಖಲಿಸಿರುತ್ತಾರೆ. ಸಾಹಿತ್ಯ ಎಂಬುದು ಮೌಲ್ಯಗಳನ್ನು ಎತ್ತಿ ಹಿಡಿಯುವುದಾಗಿದೆ. ಪುರುಷರು ಸಾಹಿತ್ಯದ ರಚನೆಯಲ್ಲಿ ತೊಡಗಿದಾಗ ಕಾಲ ಮತ್ತು ಸಮಾಜ ಪೂರಕವಾಗಿತ್ತು, ಆದರೆ ಮಹಿಳೆಯರಿಗೆ ಇದು ಅಂದಿನ ಕಾಲದಲ್ಲಿ ಪೂರಕವಾಗಿರಲಿಲ್ಲ. ಅವರು ತಮ್ಮ ಅಭಿಪ್ರಾಯಗಳನ್ನು ನೇರವಾಗಿ ವ್ಯಕ್ತಪಡಿಸಲು ಸಾಧ್ಯವಿರಲಿಲ್ಲ ಅಂತಹ ಸಂದರ್ಭದಲ್ಲಿ ವಚನ ಯುಗದ ವಚನಕಾರ್ತಿಯರು ಮಹಿಳೆಯರಿಗೆ ಪ್ರೇರಣೆ ನೀಡಿದ್ದರು. ಮುಂದುವರಿದಂತೆ ಕೃತಿ ಕಾವ್ಯ ರಚನೆಕಾರರು ಹೊರಬಂದರು ಹಾಗೂ 1920 ರಿಂದ 30ರ ವರೆಗಿನ ಮಹಿಳೆಯರು ಬರವಣಿಗೆಯನ್ನು ಗಂಭೀರವಾಗಿಯೇ ಪರಿಗಣಿಸಿದರು, ಇದರ ಸಣ್ಣ ಪ್ರಯತ್ನದೊಂದಿಗೆ ಲೇಖನಗಳು, ಬರಹಗಳು, ಸೃಷ್ಟಿಯಾದವು.

ಸಾಹಿತ್ಯ ರಚನೆಗೆ ಬೇಕಾದ ವಾತಾವರಣ ಪ್ರೋತ್ಸಾಹ ಸೌಲಭ್ಯ ಇಲ್ಲದಿರುವ ಸಂದರ್ಭದಲ್ಲಿ ಅಂದು ತಾವಿದ್ದ ಸಾಮಾಜಿಕ ಸ್ಥಿತ್ಯಂತರಗಳನ್ನು, ಬದಲಾವಣೆಗಳನ್ನು ದಾಖಲಿಡುವಲ್ಲಿ ಮಹಿಳಾ ಸಾಹಿತಿಗಳು ಹಿಂದೆ ಬಿದ್ದಿಲ್ಲ ಸ್ತ್ರೀಗೆ ತನ್ನದೇ ಆದ ಒಂದು ಲೋಕವಿದೆ ಅಲ್ಲಿ ಅವಳು ಹೇಗೆ ಬದುಕಿದ್ದಾಳೆ ಎಂಬುದನ್ನು ತಿಳಿಯಬೇಕೆಂದರೆ ಅವಳ ರಚನೆಯ ಸಾಹಿತ್ಯದಿಂದ ಸಾಧ್ಯವಾಗುತ್ತದೆ.

ಸ್ತ್ರೀವಾದಿ ಚಿಂತಕರಾದ ಎಚ್. ಎಸ್. ಶ್ರೀಮತಿ ಅವರು ತಮ್ಮ ಅನುವಾದಿತ ಕೃತಿಯಲ್ಲಿ ಈ ರೀತಿ ಹೇಳಿದ್ದಾರೆ "ಪಿತೃ ಪ್ರಧಾನತೆಯು ಇಡೀ ಪುರುಷ ಸಮುದಾಯಕ್ಕೆ ಲಾಭದಾಯಕ ಎಂಬುದು ಸ್ಪಷ್ಟವೇ ಸರಿ ಹೆಂಗಸರಿಗಿಂತ ಅವರು ಉನ್ನತ ದರ್ಜೆಯವರು ಎಂಬ ಆಳವಾದ ಗ್ರಹಿಕೆಯೊಂದು ಇದೆ ಹಾಗಾಗಿ ಗಂಡಸರು ಹೆಂಗಸರನ್ನು ಆಳಬೇಕು ಎನ್ನುವ ತೀರ್ಮಾನವು ಆಗಿಬಿಟ್ಟಿದೆ" (ಬೆಲ್ ಹುಕ್ಸ್, ಎಲ್ಲರಿಗಾಗಿ ಸ್ತ್ರೀವಾದ, ಕನ್ನಡಕ್ಕೆ – ಎಚ್. ಎಸ್. ಶ್ರೀಮತಿ) ಎಂಬಲ್ಲಿ ಮಹಿಳೆ ತನಗೆ ಮನಬಂದಂತೆ ಅಥವಾ ತನ್ನ ಮನಸೋ ಇಚ್ಛೆ ಜೀವನ ಮಾಡುವ ಪರಿಸ್ಥಿತಿಯಿಂದ ವಂಚಿತಳಾಗಿದ್ದಳು ಎನ್ನಬಹುದು ಪುರುಷನ ದಬ್ಬಾಳಿಕೆಯ ಪರಿಸ್ಥಿತಿಯನ್ನೇ ಬೆಂಬಲಿಸುತ್ತಾ ಉಳಿಯುವ ಸಮಾಜದಲ್ಲಿ ಸ್ತ್ರೀಯು ತನ್ನ ಅಸ್ತಿತ್ವವನ್ನು ಹುಡುಕುವುದು ಕಷ್ಟದಾಯಕವಾಗಿತ್ತು ಎನ್ನಬಹುದು.

ಹೆಣ್ಣಿನ ಅಸ್ತಿತ್ವವನ್ನು ನಾವು ಅಸ್ಮಿತೆ ಎಂದು ಕರೆಯಬಹುದು. ಸ್ತ್ರೀಯ ಗುಣಗಳಿಂದ ಅವಳ ಅಸ್ತಿತ್ವವನ್ನು ಗುರುತಿಸುತ್ತೇವೆ. ಹೇಗೆ 'ಪುಷ್ಪದಿಂದ ಪರಿಮಳವು ಸಾಧ್ಯವೋ' ಹಾಗೆ. ಮಹಿಳೆ ಪುರುಷ ಪ್ರಧಾನ ವ್ಯವಸ್ಥೆಯ ನೆರಳಿಂದ ತಾನು ಹೊರ ಬಂದು ತನ್ನ ವ್ಯಕ್ತಿತ್ವ ಅಥವಾ ಅಸ್ತಿತ್ವ ರೂಪಿಸಿಕೊಳ್ಳಲು ಮಾಡಿದ ಪ್ರಯತ್ನದಲ್ಲಿ ಅತ್ಯಂತ ಸಮರ್ಥವಾಗಿ ಬಳಸಿಕೊಂಡದ್ದು ಬರವಣಿಗೆ ಅಥವಾ ಸಾಹಿತ್ಯ ರಚನೆ. ವಚನಕಾರ್ತಿಯರು 12ನೇ ಶತಮಾನದಿಂದ ಬರವಣಿಗೆಯನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡರೆ, 19ನೇ ಶತಮಾನದಲ್ಲಿ ಅನೇಕ ಮಹಿಳೆಯರು ಬರವಣಿಗೆ ಮೂಲಕ ಅ ತಮ್ಮ ತುಮುಲ ಮತ್ತು ಒಳನೋಟಗಳನ್ನು ಹೊರಹಾಕಲು ಸಾಹಿತ್ಯ ರಚನೆಯ ದಾರಿಯನ್ನು ಕಂದುಕೊಂಡರು ಹಾಗೂ ಅಸ್ತಿತ್ವವನ್ನು ಕಂಡುಕೊಳ್ಳಲು ಪ್ರಯತ್ನಿಸಿದರು.

ಮಹಿಳೆಯರು ತಮ್ಮ ಸಾಹಿತ್ಯವನ್ನು ಅಡುಗೆಮನೆ ಸಾಹಿತ್ಯ ಎಂದಾಗಿ ಗೇಲಿ ಮಾಡುವ ಮನಸ್ಥಿತಿಗಳನ್ನು ಗೌಣ ಮಾಡುವಂತೆ ನಡೆದರು ಇದರಿಂದ ಸ್ತ್ರೀ ಸಮಸ್ಯೆಗಳನ್ನು ಸಮಾಜ ಮುಖಿಯಾಗಿ ಹೊರ ತರಲು ಸಾಧ್ಯವಾಯಿತು ಇದರಿಂದ ತನ್ನ ಸುತ್ತಲಿನ ಮಹಿಳೆಯರ ಸಮಸ್ಯೆಗಳ ಬಗ್ಗೆ ತನ್ನ ಸಾಹಿತ್ಯದ ಮೂಲಕ ಬರಹ ರೂಪಕ್ಕಿಳಿಸಲು ಪ್ರಯತ್ನಿಸಿದಳು.

ಸ್ತ್ರೀ ಸಂವೇದನೆಯ ಹಲವು ಮುಖಗಳು ಲೇಖಕಿಯರ ಬರಹಗಳಿಂದ ಅನಾವರಣಗೊಂಡವು. ಇಲ್ಲಿ ಹೆಣ್ಣಿನ ಬದುಕು ಪುರುಷಪ್ರಧಾನ ವ್ಯವಸ್ಥೆ ಎದುರು ಮಂಡಿಯೂರಿ ಸೋಲೊಪ್ಪುವ ಅಥವಾ ಎದುರಿಸಲಾಗದೆ ಆತ್ಮಹತ್ಯೆಗೆ ಶರಣಾಗುತ್ತಿದ್ದ ಪರಿಸ್ಥಿತಿಗಳನ್ನು ನೋಡುತ್ತಿದ್ದರು ಆದರೆ ಲೇಖಕಿಯರ ಸಾಹಿತ್ಯದ ನಾಯಕಿಯರು ಶೋಷಣೆಯನ್ನು ವಿರೋಧಿಸಿ ಹೊರಬರುವ ಪ್ರಯತ್ನವನ್ನು ಮಾಡಲಿಲ್ಲವಾದಾಗ್ಯೂ ಅಂದಿನ ಸಂದರ್ಭಕ್ಕೆ ಸ್ತ್ರೀ ಸಮಸ್ಯೆಯಲ್ಲಿ ನಲುಗುತ್ತಿದ್ದಾಳೆ ಎಂಬುದನ್ನು ಲೇಖಕಿಯರ ಬರಹದೊಂದಿಗೆ ತೋರಿಸಿಕೊಟ್ಟರು ಎಂಬ ವಿಷಯ ಸಾಮಾಜಿಕ ಪಲ್ಲಟತನಕ್ಕೆ ಕಾರಣವಾಯಿತು ಇದರಿಂದ ಪ್ರೇರಣೆಗೊಂಡ ಸ್ತ್ರೀ ತನ್ನ ಅಸ್ಮಿತೆಗೆ ಅಡೆತಡೆಯಾಗುವ ಸಂದರ್ಭವನ್ನು ವಿರೋಧಿಸುತ್ತೇವೆ ಎನ್ನುವಂತೆ ಶೋಷಣೆಯನ್ನು ವಿರೋಧಿಸಿ ಹೊರಬಂದ ಕಥಾ ನಾಯಕಿಯರು ನಂತರದ ತಲೆಮಾರಿನ ಲೇಖಕಿಯರ ಬರಹಗಳಲ್ಲಿ ಅತಿ ಹೆಚ್ಚು ಒಡಮೂಡಲು ಸಾಧ್ಯವಾಯಿತು. ಮಹಿಳಾ ಸಾಹಿತ್ಯದ ಪರಂಪರೆಯಲ್ಲಿ ಸ್ಥಿತ್ಯಂತರ ಹೊಂದಿ ಸ್ತ್ರೀ ವಾದಿ ನೆಲೆಯಲ್ಲಿ ರಚನೆಗಳು ಮೊದಲುಗೊಂಡು ಶೋಷಣೆ ವಿರುದ್ಧ ಪ್ರತಿಭಟಿಸುವ ಶಕ್ತಿಯನ್ನು ಮಹಿಳೆಯ ಸಂಚಯಿಸಿಕೊಂಡಾಗ ಪುರುಷನಷ್ಟೇ ಸಮರ್ಥವಾಗಿ ಬದುಕಬಲ್ಲಳು ಎಂಬುದನ್ನು ತಮ್ಮ ಲೇಖನಿಯ ಮೂಲಕ ಬರವಣಿಗೆಯ ರೂಪದಲ್ಲಿ ಹೊರತರಲು ಪ್ರಯತ್ನಿಸಿದ್ದಾರೆ.

ವೈದೇಹಿ, ಗೀತಾ ನಾಗಭೂಷಣ, ವೀಣಾ ಶಾಂತೇಶ್ವರ ತಮ್ಮ ಸಾಹಿತ್ಯದಲ್ಲಿ ನಾಯಕಿಯ ಪಾತ್ರದ ಮೂಲಕ ಸಮಾಜದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸುತ್ತಾ, ಶೋಷಣೆಯನ್ನು ಧಿಕ್ಕರಿಸಿ ಹೊರಬಂದು ಹೊಸ ಬದುಕು ಕಟ್ಟಿಕೊಳ್ಳುವಲ್ಲಿ ಮುಂದುವರಿದರು. ಮಧ್ಯಮ ವರ್ಗ ಹಾಗೂ ಕೆಳವರ್ಗದ ಮಹಿಳೆಯರ ಸಮಸ್ಯೆಗಳನ್ನು ಬರವಣಿಗೆಯನ್ನಾಗಿಸಿದರು. ಕಾರ್ಪೊರೇಟ್ ಸಂಸ್ಕೃತಿಗೆ ಸೇರಿದ ಮಹಿಳೆಯರ ಬವಣೆಗಳನ್ನು ನೇಮಿಚಂದ್ರ, ಸುನಂದ ಪ್ರಕಾಶ್ ಕಡಮೆ ಮುಂತಾದವರು ಸಾಹಿತ್ಯಕ್ಕೆ ತಂದರು.

ಸಬೀಹಾ ಭೂಮಿಗೌಡ, ಶಶಿಕಲಾ, ರೂಪ ಹಾಸನ ಮುಂತಾದವರು ಈ ದಿನಗಳಲ್ಲಿನ ಲೇಖಕಿಯರು ಮಹಿಳೆಯನ್ನು ಪುರುಷ ಪ್ರಧಾನ ನೆಲೆಯಿಂದ ಸಂಪೂರ್ಣವಾಗಿ ಹೊರತಂದು ಅವಳದೇ ಒಂದು ಅಸ್ಮಿತೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತಿರುವುದು ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯದ ಪ್ರಮುಖ ಬೆಳವಣಿಗೆಗಳಲ್ಲೊಂದು.

ಮಹಿಳಾ ಸಾಹಿತ್ಯದ ಆರಂಭದ ದಿನಗಳಲ್ಲಿಯೇ ಅಸಮರ್ಪಕ ಸಂಪ್ರದಾಯಗಳ ವಿರುದ್ಧ ಧ್ವನಿ ಎತ್ತಿ ನಿಂತವರು ಕೊಡಗಿನ ಗೌರಮ್ಮನವರು ಇವರ ವಾಣಿಯ ಸಮಸ್ಯೆ ಕಥೆಯಲ್ಲಿ ಇಂದು ವಯೋಸಹಜ ಬಯಕೆಗಳಿಗೆ ಸ್ಪಂದಿಸುವುದಕ್ಕಿಂತ ವಾಣಿ ಎಂಬ ಒಂದು ಹೆಣ್ಣಿನ ಬದುಕು ಹಾಳಾಗಬಾರದು ಎಂಬ ವಿವೇಚನೆ ಕೌಟುಂಬಿಕ ಮೌಲ್ಯಗಳು ಸ್ಥಾಯಿಯಾಗಿರುತ್ತವೆ ಎಂಬಲ್ಲಿ 'ಹೆಣ್ಣಿಗೆ ಹೆಣ್ಣೇ ಶತ್ರು' ಎಂಬುದು ಎಷ್ಟು ಗೌಣವಾಗಿರುವುದನ್ನು ಗಮನಿಸಬೇಕಾಗುತ್ತದೆ ಹಾಗೂ ಸಂಪ್ರದಾಯಗಳ ಚೌಕಟ್ಟಿನಲ್ಲಿ ಅದುಮಿಟ್ಟ ಹೆಣ್ಣುಗಳ ಬದುಕು ಪಲಾಯನವಾದಿತನಕ್ಕೆ ಮುಖ ಮಾಡಿರುವುದನ್ನು ಕಾಣಬಹುದಾಗಿದೆ.

ಕನ್ನಡ ಮಹಿಳಾ ಕಥಾ ಲೋಕದಲ್ಲಿ ಸಂಚಲನ ಮೂಡಿಸಿದ ಲೇಖಕಿ ಎಂದರೆ ಸಾರಾ ಅಬೂಬಕ್ಕರ್ ಇವರ 'ಚಪ್ಪಲಿಗಳು' ಎಂಬುದು ಮುಸ್ಲಿಂ ಹೆಣ್ಣು ಮಕ್ಕಳ ಬದುಕಿನ ರೀತಿಯನ್ನು ತೆರೆದಿಡುವ ಕಥೆ. ಹೆಣ್ಣನ್ನು ಕೇವಲ ದೈಹಿಕವಾಗಿ ಅಥವಾ ಭೋಗದ ವಸ್ತುವಾಗಿ ಮಾತ್ರ ನೋಡುವ ಸಂದರ್ಭವನ್ನು ಬಿಟ್ಟು ಆಕೆಯನ್ನು ಪುರುಷ ತನ್ನಂತೆ ಸಮಾನವಾಗಿ ಭಾವಿಸಬೇಕಾಗಿದೆ. ಈ ಕಥೆಯಲ್ಲಿ ಸಮೀರಳ ತಂದೆ ಅಂಧ, ಧಾರ್ಮಿಕ ನಿಯಮಗಳಿಂದ ಕುರುಡನಾಗಿದ್ದರು. ಆದ್ದರಿಂದ ಶಿಕ್ಷಣವೂ ದೊರೆಯದೆ ಮನೆಯಲ್ಲಿ ಉಳಿದು ಶಬೀರನನ್ನು ವಿವಾಹವಾದ ಮೇಲೆ ಅವಳಿಗೆ ದಾಂಪತ್ಯದ ನಿಜವಾದ ಸುಖದ

ಅರಿವಾಗುತ್ತದೆ, ಆದರೆ ಅವನು ಕೊಲ್ಲಿಯಲ್ಲಿದ್ದವನು ಮನೆಯಲ್ಲಿ ಬಾಣಂತನದ ಕೆಲಸ ಮಾಡುತ್ತಾ ಬಿದ್ದಿರುವ ಸಮೀರ ಮನೋರೋಗಿಯಾಗಿ ಬಿಡುತ್ತಾಳೆ ಅವನ ಮಾವನಿಗೆ ಸಮೀರಳನ್ನು ಕೇವಲ ಚಪ್ಪಲಿಯ ರೀತಿ ಭಾವಿಸಿ ಬೆಲೆ ಇಲ್ಲದವಳನ್ನಾಗಿಸಿ ನೋಡುವ ಭಾವನೆ ಇರುತ್ತದೆ. ಆದರೆ ಮಗ ಶಬೀರ್ ಅದರ ವಿರುದ್ಧವಾಗಿ ಯೋಚಿಸುತ್ತಿರುತ್ತಾನೆ ಹಾಗೂ ಅದಕ್ಕಾಗಿ ಕೊಲ್ಲಿ ರಾಷ್ಟಕ್ಕೆ ಹಿಂದಿರುಗದೆ ಇರುವ ಗಂಡಿನ ಚಿತ್ರಣ ಕೇವಲ ಸಾಮಾಜಿಕ ಮೌಲ್ಯವನ್ನು ಮಾತ್ರ ಎತ್ತಿ ಹಿಡಿಯುವುದಲ್ಲದೆ, ವ್ಯಕ್ತಿತ್ವದ ತುಡಿತವನ್ನು ನೀಡುತ್ತದೆ ಎಂಬಲ್ಲಿ ಎಲ್ಲಾ ಪುರುಷರು ಕೆಟ್ಟವರಿರುವುದಿಲ್ಲ ಎಂಬುದು ಇಲ್ಲಿ ತಿಳಿದುಬರುವ ವಿಷಯ. ಸ್ತ್ರೀ ಅಸ್ತಿತ್ವಕ್ಕೆ ಬೆನ್ನೆಲುಬಾಗಿ ನಿಲ್ಲುವಲ್ಲಿ ಇಂತಹ ಪುರುಷ ಪಾತ್ರಧಾರಿಗಳು ಮುಖ್ಯ ಪಾತ್ರವಹಿಸುತ್ತದೆ.

ಮಹಿಳಾ ಅಸ್ಮಿತೆಯ ಧ್ವನಿಯನ್ನು ನಮ್ಮ ಕನ್ನಡ ಸಾಹಿತ್ಯದಲ್ಲಿ ಸ್ಮರಿಸಿದಾಗ ತಕ್ಷಣ ನೆನಪಾಗುವುದು ವೈದೇಹಿ ಅವರ ಹೆಸರು. ಇವರಗಳ ಬರಹಗಳ ಕೇಂದ್ರವೇ ಹೆಣ್ಣು ವೈದೇಹಿರು ತಮ್ಮ ಕಥೆಗಳಲ್ಲಿ ಬದುಕನ್ನು ಹೆಣ್ಣಿನ ದೃಷ್ಟಿಕೋನದಿಂದ ಗಮನಿಸಿ ವಿವಿಧ ಆಕೃತಿಗಳಲ್ಲಿ ಭಾವ ಸ್ಥಿತಿಗಳಲ್ಲಿ ಹೆಣ್ಣು ಕಾಣಿಸಿಕೊಳ್ಳುತ್ತಾಳೆ. ಇವರ ಕಥೆಗಳಲ್ಲಿ ಸ್ವತಂತ್ರ ಆಲೋಚನೆ ಮಾಡಬಲ್ಲ, ವಿವೇಚನೆಯುಳ್ಳ ನಾಯಕಿಯರನ್ನು ಸೃಷ್ಟಿಸಿದರು. ಇವರ ಕಥೆಗಳಲ್ಲಿ ಹೆಣ್ಣಿನ ವಿವಿಧ ಮುಖಗಳ ಪರಿಚಯ ಸಹಜವನ್ನುವಂತೆ ಹಾಗೂ ಹೆಣ್ಣಾಗಿ ಹೆಣ್ಣಿನ ಜವಾಬ್ದಾರಿಯ ಬದುಕನ್ನು ಹೇಳುತ್ತಾ ಗಂಡಿನ ಅನುಭವ ದೊಡ್ಡದಾದರೂ ಅದು ಅವರ ಪ್ರಪಂಚದ್ದು ಮಾತ್ರ, ಹೆಣ್ಣಿನ ಪ್ರಪಂಚ ಎಂದೂ ಹೆಣ್ಣಿಗೆ ಹಿರಿದಾದದ್ದೆ ಎಂಬ ಸ್ವಾಭಿಮಾನದ ಮಾತುಗಳು ಸ್ತ್ರೀಯ ಅಸ್ಮಿತೆಯ ಕುರಿತು ಹೊಂದಿರುವ ನಿಲುವನ್ನು ಕಾಣಬಹುದಾಗಿದೆ.

ಆಧುನಿಕ ಬದುಕು ತೆರೆದುಕೊಂಡಂತೆ ಮಹಿಳೆಯ ಬದುಕಿನ ಮೇಲೆ ಇಂದಿನ ಕೊಳ್ಳುಬಾಕ ಸಂಸ್ಕೃತಿ ಮತ್ತು ಜಾಗತೀಕರಣದ ಪ್ರಭಾವವನ್ನು ನೇಮಿಚಂದ್ರ ಅವರು ತಿಳಿಸಿದ್ದಾರೆ ಅವರ ಬದುಕು ಬದಲಿಸಬಹುದು ಎಂಬ ಕಥಾಸಂಕಲನದಲ್ಲಿ ಫ್ಲೇವಿಯ ಹಿಂಸೆ ಕೊಡುವ ಗಂಡನಿಂದ ತಪ್ಪಿಸಿಕೊಂಡು ಮೂರು ಮಕ್ಕಳನ್ನು ಓದಿಸಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಿ ತಾನೂ ಶಿಕ್ಷಣ ಪಡೆದು ಸ್ತ್ರೀಪರ ನ್ಯಾಯವಾದಿಯಾಗಿ ಇಂದಿಗೂ ಇರುವುದನ್ನು ಕಾಣಬಹುದು ಇಲ್ಲಿ ಬಡಿಸಿಕೊಳ್ಳುವ ಗಂಡನಿಂದ ಹೊರಗೆ ಹೋದರೆ ಜೀವನ ಹೇಗೆ ಎಂಬ ಪ್ರಶ್ನೆಯನ್ನು ಎತ್ತದೆ ತನ್ನ ಅಸ್ಮಿತೆಯ ಹುಡುಕಾಟದಲ್ಲಿ ಮನೆಯಿಂದ ಹೊರ ಬಂದು ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ವೀಣಾ ಶಾಂತೇಶ್ವರ ಅವರು ಸಂಪ್ರದಾಯದ ಜಗತ್ತಿನಲ್ಲಿ ಅನೇಕ ವಿಧಿ ನಿಷೇಧಗಳನ್ನು ಹೆಣ್ಣಿನ ಮೇಲೆ ಹೇರಿರುವುದನ್ನು ಹಾಗೂ ಅಲ್ಲಿ ಸ್ತ್ರೀ ತನಗೆ ತಾನೆ ಅಪರಚಿತಳಾಗಿರುವುದನ್ನು ಹಾಗೂ ತನ್ನದಲ್ಲದ ಬದುಕಿನ ಜವಾಬ್ದಾರಿಗಳಿಗೆ ಹೆಗಲನ್ನು ಕೊಡುತ್ತಾ ಬರುತ್ತಿರುವ ಸ್ತ್ರೀ ಸಮಾಜಕ್ಕೆ ತಮ್ಮ ಕಥೆಗಳ ಮೂಲಕ ಹೊರ ದಾರಿಯನ್ನು ತೋರಿಸಿದ್ದಾರೆ. 'ನಿರಾಕರಣೆ' ಎಂಬ ಕತೆಯಲ್ಲಿ ದುಶ್ಯಂತ ಶಕುಂತಲೆಯರ ಸಂಭಾಷಣೆಯ ಮೂಲಕ ದುಶ್ಯಂತ ನಿರಾಕರಿಸಿರುವ ಶಕುಂತಲೆಯನ್ನು, ಶಕುಂತಲೆಯು ನಾನು ಕೂಡ ನಿರಾಕರಿಸುತ್ತೇನೆ ಎಂಬಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಅರ್ಯ ಸ್ತ್ರೀಯಾದ ನಾನು ನನಗೆ ನಿರಾಕರಿಸುವ ಹಕ್ಕಿಲ್ಲ ಎಂಬುದನ್ನು ಅಸ್ಪಷ್ಟವಾಗಿಸಿ ಇಲ್ಲಿ ದುಶ್ಯಂತನನ್ನು ನಿರಾಕರಿಸುವ ಧೈರ್ಯವನ್ನು ಮಾಡುವುದು ಇವರ ಎಚ್ಚೆತ್ತ ಮಹಿಳೆಯ ವೈಚಾರಿಕ ದೃಷ್ಟಿಕೋನದ ಹಾಗೂ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳುವ ಧೈರ್ಯವನ್ನು ಮಾಡುವ ಮೂಲಕ ಅನ್ಯಾಯವನ್ನು ವಿರೋಧಿಸುವ ಕಥಾನಾಯಕಿ ಆಗುತ್ತಾಳೆ.

ಸ್ತ್ರೀಯರು ತಮ್ಮ ಅಸ್ತಿತ್ವದ ಹುಡುಕಾಟವನ್ನು ಮುಂದುವರಿಸುತ್ತಾ ತನ್ನತನವನ್ನು ಉಳಿಸಿಕೊಳ್ಳಲು ಧೈರ್ಯಗೆಡದೆ ಮುನ್ನುಗ್ಗುತ್ತಿರುವ ಈ ಸಂದರ್ಭದಲ್ಲಿ ಚಹರೆ ಕೃತಿಯಲ್ಲಿ ಎಚ್. ಎಸ್. ಶ್ರೀಮತಿ ಅವರು ಬರೆದಿರುವ ಸಾಲುಗಳನ್ನು

ಸ್ಮರಿಸಬಹುದಾಗಿದೆ. "ಮಹಿಳೆ ಇಂದು ತನ್ನ ಸ್ಥಿತಿಯ ಬಗ್ಗೆ ಜಾಗೃತಳಾಗಿದ್ದಾಳೆ ಆ ಬಗ್ಗೆ ಚಿಂತನೆ ನಡೆಸಿದ್ದಾಳೆ. ಸಮಸ್ಯೆ ಪರಿಹಾರಕ್ಕಾಗಿ ಹೋರಾಡುತ್ತಿದ್ದಾಳೆ ಎಂದರೆ ಇದನ್ನು ಪುರುಷ ಚಿಂತನೆ ಪ್ರತಿರೋಧಿಸುತ್ತದೆ ಎಂಬುದು ಸಹಜವೇ ಮಹಿಳೆಯರು ಈ ಪ್ರಮಾಣದಲ್ಲಿ ಜಾಗೃತಳಾಗಿ ಚಿಂತನೆಗೆ ತೊಡಗಲು ಅವಳಿಗೆ ಚರಿತ್ರೆ ಅವಕಾಶವನ್ನು ಒದಗಿಸಿತು".

ಮಹಿಳೆಯು ಧೈರ್ಯದಿಂದ ವರ್ತಿಸಲು ವಿವೇಚನೆಯಿಂದ ಚಿಂತಿಸಲು ಅವಕಾಶ ದೊರೆತು ಬಿಡುಗಡೆಗಾಗಿ ಹಾತೊರೆಯುತ್ತಿರುವ ಈ ಸಂದರ್ಭದಲ್ಲಿ ಅವಳಿಗೆ ಸ್ಪಷ್ಟವಾಗಿ ದಾರಿ ಕಾಣುತ್ತಿದೆ, ಅಲ್ಲದೆ ಮಹಿಳೆ ಸಂಘಟಿತಳು ಆಗಿ ಹಲವಾರು ಸಂಘಟನೆಗಳನ್ನು ತೆರೆಯುವಲ್ಲಿ ಯಶಸ್ವಿಯಾಗುತ್ತಿದ್ದಾಳೆ, ಸ್ತ್ರೀಯ ಅಸ್ಮಿತೆ ಎಂಬುದು ಸ್ತ್ರೀಯರ ಅಸ್ಮಿತೆ ಎಂದಾದಾಗ ಎಲ್ಲವೂ ಕೂಡ ಒಂದು ದಾರಿಯಲ್ಲಿ ನಡೆದುಕೊಂಡು ಹೋಗಲು ಅವಕಾಶ ಕಲ್ಪಿಸಿದಂತಾಗುತ್ತದೆ. ಮಹಿಳೆಯನ್ನು ಭೂಮಿಗೆ ಹೋಲಿಸುವುದರ ಮೂಲಕ ಸಮಾಧಾನ ಗುಣದವಳು ಎಂದು ಆಗಿನಿಂದಲೂ ಹೊನ್ನ ಶೂಲಕ್ಕೇರಿಸುತ್ತಾ ಬಂದಿರುವ ಜನಾಂಗವನ್ನು ಕಾಣುತ್ತೇವೆ, ಆದರೆ ಅವಳಿಗೆ ಅಸ್ತಿತ್ವದ ಪರಿಕಲ್ಪನೆ ಅಥವಾ ಅವಳಿಗೆ ಸ್ವತಂತ್ರ ಎಂಬ ಪ್ರಶ್ನೆ ಉದ್ಭವವಾದಾಗ ಮಾತ್ರ ಎಲ್ಲರೂ ಕೂಡ ಹಿಂದೆ ಸರಿಯುತ್ತಾರೆ, ಅವಳಿಗೂ ಅವಳ ಇಚ್ಛೆಯಂತೆ ಬದುಕಲು ಅವಕಾಶವಿರಬೇಕು, ಅವಳ ಭಾವನೆಗಳಿಗೆ ಸ್ಪಂದಿಸುವ ಮನಸ್ಸುಗಳು ಬೇಕು, ಗರಿ ಬಿಚ್ಚಿ ಹಾರುವಂತೆ ಮನ ಬಿಚ್ಚಿ ಮಾತಾಡಿದಾಗ ತಪ್ಪು ಎಂದು ಹೇಳದಂತೆ ಅವಳನ್ನು ಕೇವಲ ಒಂದು ವ್ಯಕ್ತಿಯಾಗಿ ಪರಿಗಣಿಸದೆ ಭಾವನಾತ್ಮಕವಾಗಿ ಅವಳಿಗೂ ಒಂದು ಮನಸ್ಸಿದೆ ಅವಳಿಗೂ ಸ್ಪಂದನೆ ಎಂಬುದು ಎಷ್ಟು ಮುಖ್ಯ ಎಂಬುದನ್ನು ಅರಿತಾಗ ಮಾತ್ರ ಅವಳ ಅಸ್ತಿತ್ವಕ್ಕೆ ಬೆಲೆ ಬರುತ್ತದೆ ಒಂದು ಕೈ ಸೇರಿದರೆ ಚಪ್ಪಾಳೆ ಆಗುವುದಿಲ್ಲ ಎಂಬಂತೆ ಅವಳ ಸುತ್ತಲಿನ ಸಮಾಜ ಪರಿಸರ ಪೂರಕವಾಗಿದ್ದಾಗ ಮಾತ್ರ ಇಲ್ಲಿ ಮಹಿಳೆಗೆ ಸ್ವತಂತ್ರ ಸಿಕ್ಕು ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಮುಂದೆ ಹೋಗಲು ದಾರಿ ದೊರೆತಂತಾಗುತ್ತದೆ ಎಂದು ಹೇಳಬಹುದು.

## ಪರಾಮರ್ಶನ ಗ್ರಂಥಗಳು


1. ದ ಸೆಕೆಂಡ್ಸೆಕ್ಸ್, ಕನ್ನಡ ಓದುಡಾ. ಎಚ್. ಶ್ರೀಮತಿ, ಸಿಮೊನ್ ದಿ ಬೋವಾ, ಬರಹ ಪಬ್ಲಿಷಿಂಗ್ ಹೌಸ್ 2011, (ಪರಿಷ್ಕೃತ ಮೊದಲ ಆವೃತ್ತಿ).
2. ದಕ್ಷಿಣ ಕರ್ನಾಟಕದ ಜನಪದ ಕಥೆಗಳು, ಜೀ. ಶಂ.ಪರಮಶಿವಯ್ಯ. (ಸಂ), ಸಾಹಿತ್ಯ ಅಕಾಡೆಮಿ, 2020 (2ನೇ ಆವೃತ್ತಿ).
3. ಮಹಿಳಾ ಅಧ್ಯಯನ : ಸಾಧ್ಯತೆಗಳು ಮತ್ತು ಸವಾಲುಗಳು, ಡಾ. ಕಿಶೋರಿ ನಾಯಕ್, ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿವಿ, 2007.
4. ಶಕ್ತಿಶಾರದೆಯ ಮೇಳ, ಡಿ.ಆರ್. ನಾಗರಾಜ್, ಅಕ್ಷರ ಪ್ರಕಾಶನ, 2015, (6ನೇ ಆವೃತ್ತಿ).
5. ಸ್ತ್ರೀವಾದ ಪದವಿವರಣ ಕೋಶ, ಎಚ್.ಎಸ್.ಶ್ರೀಮತಿ, ಅಭಿನವ ಪ್ರಕಾಶನ 2018 (ಒಂದನೇ ಆವೃತ್ತಿ).
6. ಸ್ತ್ರೀವಾದ ಮತ್ತು ಲೈಂಗಿಕ ತಾವಾದ, ಎಚ್.ಎಸ್.ಶ್ರೀಮತಿ, ಅಹರ್ನಿಷಿ ಪ್ರಕಾಶನ 2019 (ಒಂದನೇ ಆವೃತ್ತಿ).